## ಕಾಡಿಗೆ ಕಣ್ಣು

ತನ್ನ ಬೇಟೆ ತನ್ನ ಬಳಿಯೇ ಬಂದು ಸಿಕ್ಕಿ ಬೀಳುವ ತನಕವೂ ಇದು ಬೇಜಾರಿಲ್ಲದೆ ಕೂತು ಕಾಯುತ್ತದೆ. ವಾರಗಟ್ಟಲೆ ಗರ ಬಡಿದಂತೆ ಒಂದೇ ಜಾಗದಲ್ಲಿ ಕೂರುವ ಸಾಮರ್ಥ್ಯದ ಈ ಹಾವು ರಂಜೀತನಿಗೆ ಸಲೀಸಾಗಿ ಸಿಕ್ಕಿದೆ ಎಂದೇ ನಾವು ಮಾತಾಡಿಕೊಂಡೆವು. ತಿಳಿಗೆಂಪು, ಹಳದಿ, ನೀಲಿ, ಗೋಧಿ ಬಣ್ಣದ ಈ ಜಾತಿಯ ಹಾವುಗಳ ಕೈಯಲ್ಲಿ ನಮ್ಮ ಮಲೆನಾಡಿನ ಜನ ಕಚ್ಚಿಸಿಕೊಳ್ಳುವುದು ಸರ್ವೇಸಾಮಾನ್ಯ . ಅಡಿಕೆ ಮರಕ್ಕೆ ಹತ್ತಿಸಿದ ಕಾಳುಮೆಣಸಿನ ಬಳ್ಳಿಯ ಒಳಗೆ ಬೆಚ್ಚಗೆ ಮಲಗಿ ಬಿಡುವ ಇದನ್ನು ಸುಲಭಕ್ಕೆ ಕಂಡು ಹಿಡಿಯಲಾಗದು. ತನ್ನ ಬಾಲದ ತುದಿ ಬಳಸಿ ಗಿಡದ ರೆಂಬೆಗೆ ಮೊದಲು ಲಾಕ್ ಮಾಡಿಕೊಳ್ಳುತ್ತದೆ. ಎಸ್ ಆಕಾರದಲ್ಲಿ ಮೈ ಬೆಂಡಾಗಿಸಿ ಕುತ್ತಿಗೆ ಮುಂದು ಮಾಡಿ ಶಿಕಾರಿಗೆ ಕಾಯುತ್ತದೆ. ಕಪ್ಪೆ ಇದರ ಮೆಚ್ಚಿನ ಆಹಾರ.

ಇಲ್ಲಿನ ಪಶ್ಚಿಮ ಘಟ್ಟಗಳಲ್ಲಿ ಹುಡುಕುತ್ತಾ ಕೂತರೆ ಒಟ್ಟು ನೂರ ಎಂಭತ್ತೊಂದು ಬಗೆಯ ಕಪ್ಪೆಯ ಪ್ರಭೇದಗಳಿವೆಯಂತೆ. ನಾವಿರುವ ಎರಡು ದಿನದಲ್ಲಿ ಇಂತಿಥವು ಮಾತ್ರ ತೋರಿಸಪ್ಪ ಎಂದು ರಂಜೀತನಿಗೆ ಮೊದಲೇ ಹೇಳಿದ್ದೆವು. ನಿಮಗೆ ಅಸಡ್ಡೆಯ ಜೀವ ಎನಿಸಬಹುದಾದ ಇಲ್ಲಿನ ಪುಟಾಣಿ ಕಪ್ಪೆಗಳ ನೋಡಲು ದೇಶವಿದೇಶದ ಜನ ಹುಚ್ಚರಂತೆ ಬರುತ್ತಾರೆ. ಆರು ತಿಂಗಳು ಮೊದಲೇ ಈ ರಂಜೀತನ ಅಪಾಯಿಟ್ಮೆಂಟ್ ಫಿಕ್ಸ್ ಮಾಡಿಕೊಂಡಿರಬೇಕು. ಸದ್ಯ ಮೂನಾರಿನಲ್ಲಿ ಅತಿ ಬೇಡಿಕೆ ಇರುವ ಪರಿಸರ ತಜ್ಞ ಇವನು. ನಮಗೂ ಯಾರೋ ವಿದೇಶಿ ಆಸಾಮಿಗಳು ಬರುವವರು ಕೊನೇ ಗಳಿಗೆಯಲ್ಲಿ ಬಾರದೇ ಹೋದಾಗ ಅದೃಷ್ಟದಂತೆ ಸಿಕ್ಕದ್ದು ಈ ಅವಕಾಶ. ನನಗೆ ಹೆಚ್ಚು ಕುತೂಹಲ ಮತ್ತು ಆಸೆ ಇದ್ದದ್ದು ಲಿಲ್ಲಿಪುಟಿಯನ್ ಎಂದು ಪ್ರೀತಿಯಿಂದ ಕರೆಯಲಾಗುವ 'ರಾರ್ಚೆಸ್ಟೆಸ್ ರೆಸ್ಪ್ಲೆಂಡೆನ್ಸ್' ಎಂಬ ಅಳಿವಿನಂಚಿನಲ್ಲಿರುವ ಕಪ್ಪೆಯನ್ನು ನೋಡಬೇಕೆಂದು. ಈ ಅಪರೂಪದ ಕಪ್ಪೆಯನ್ನು ನೋಡುವುದು ನನ್ನ ಕನಸಾಗಿತ್ತು. ಬರೀ ಅದರ ಹೆಸರು ಕೇಳಿದಾಗ ನನ್ನ ಮನಸ್ಸಿಗೆ ಏನೂ ಅನ್ನಿಸಿರಲಿಲ್ಲ. ಆದರೆ ಅದನ್ನು ನೋಡಿದಾಗ ಅದರ ಸೌಂದರ್ಯವನ್ನು ಕಂಡಾಗ ಆದ ಆನಂದ ಅಷ್ಟಿಷ್ಟಲ್ಲ. ವಜ್ರದಷ್ಟೇ ಬೆಲೆಬಾಳುವ ಈ ಕಪ್ಪೆ ದಕ್ಷಿಣ ಭಾರತದ ಆನೈಮುಡಿಯ ಎಂಬ ಶಿಖರದಲ್ಲಿತ್ತು. ಎರಡು ಸಾವಿರದ ಆರುನೂರ ತೊಂಭತ್ತೊಂದು ಮೀಟರ್ ಎತ್ತರ ಹೋದರೆ ಮಾತ್ರ ಸಿಗುವ ಇದನ್ನು ಹುಡುಕಲು ಮಾರನೆಯ ದಿನ ಹೊರಟೆವು. ನಾಲ್ಕು ಗಂಟೆಗಳ ಯಮಯಾತನೆಯ, ಅಪಾಯಕಾರಿ ತಿರುವಿನ ಬೆಟ್ಟದ ಕಚ್ಚಾ ರಸ್ತೆಯ ಪಯಣ ನಮ್ಮ ಎಲುಬುಗಳನ್ನೂ ಅಮುಕಿ ಬಿಸಾಡಿತು.

ಮಾಲಿನ್ಯವಿಲ್ಲದ, ಕೀಟನಾಶಕ ಕಾಣದ, ಮಾನವ ನಿರ್ಮಿತ ಬೆಂಕಿಯ ಕಾಟವಿಲ್ಲದ ಕಡೆ ಇದರ ನೆಲೆ ಇರುವುದು. ಮೋಡಗಳಿಗೆ ಸಮೀಪವಾಗಿ, ನಿಶ್ಶಬ್ದತೆಗೆ ಸಾಕ್ಷಿಯಾದ ತಂಪು ನೀರಿನ ಸರೋವರವೊಂದು ಆ ಶಿಖರ ತುದಿಯಲ್ಲಿದೆ. ಇಲ್ಲಿನ ಕೇವಲ ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಷ್ಟೇ ಇದು ಬದುಕುವುದು. ಇಷ್ಟು ಗೆರೆದಾಟಿ ಕೊಂಚ ಮುಂದೆ ಹೋದರೆ ಇವು ಸಿಗುವುದಿಲ್ಲ. ಈ ಬೆಟ್ಟದ ಮೇಲಿನ ಜೀವಗಳು ನಾ ಮೊದಲೇ ಹೇಳಿದಂತೆ ತಮ್ಮ ದೇಹಕ್ಕೆ ಸೂಕ್ತ ಎನಿಸುವ ವಾತಾವರಣದಲ್ಲಿ ಮಾತ್ರ ತಮ್ಮ ಇರುವಿಕೆಯನ್ನು ಖಾತ್ರಿ ಪಡಿಸಿಕೊಂಡು ಕೂತಿವೆ. ಯಾರ್ಯಾರು ಎಲ್ಲೆಲ್ಲಿರಬೇಕು ಎಂದು ನಿಸರ್ಗ ನಿರ್ಧರಿಸಿದ ವೇಳಾಪಟ್ಟಿಯನ್ನು ಚಾಚೂ ತಪ್ಪದೆ ಪಾಲಿಸುತ್ತಿವೆ. ಜೀಪು ಮೇಲಕ್ಕೆ ಏರಿದಂತೆ ಚಳಿ, ಮಂಜಿನ ಸಾಂದ್ರತೆ ಅಧಿಕವಾಗುತ್ತಾ ಹೋಯಿತು. ಆಗ ಆತ ಹೇಳಿದ. 'ನೋಡಿ ಫ್ರಿಜ್ಜಿನಲ್ಲಿ ನಾವು ಪದಾರ್ಥಗಳನ್ನು ಅವಕ್ಕೆ ಎಷ್ಟೆಷ್ಟು ತಂಪು ಬೇಕೋ ಆ ಕ್ರಮದಲ್ಲಿ ತಂಪು ತಾಗುವಂತೆ ಜೋಡಿಸಿಟ್ಟಿರುತ್ತೇವೆ. ಫ್ರಿಜ್ಜು ಒಂದೇ ಆದರೂ ಅದರೊಳಗೆ ಹರಿದಾಡುವ ಥಂಡಿ ಒಂದೊಂದು ಭಾಗದಲ್ಲೂ ಒಂದೊಂದು ಪ್ರಮಾಣದಲ್ಲಿರುತ್ತೆ. ಅದೇ ಥಿಯರಿ ನೀವು ಇಲ್ಲೂ ಅನ್ವಯಿಸಿಕೊಂಡು ನೋಡಿ. ಎಲ್ಲಾ ಜೀವರಾಶಿಗಳು ಒಂದೇ ಕಡೆ ಇದ್ದರೆ ಆಹಾರದ ಸಮಸ್ಯೆ ಆಗಬಹುದು. ಪೈಪೋಟಿ ಹೆಚ್ಚಾಗಿ ಮಾರಾಮಾರಿ ನಡೆಯಬಹುದು, ಇದರಿಂದ ಜೀವಿಗಳ ನಾಶವೂ ಆಗಬಹುದು, ಅದಕ್ಕೆ ಈ ಪ್ರಕೃತಿ ಎಲ್ಲರಿಗೂ ಸಮನಾಗಿ ಜಾಗವನ್ನು ಪಾಲು ಮಾಡಿ ಕೊಟ್ಟಿದೆ. ತಿನ್ನುವ ಆಹಾರವನ್ನು ಕೂಡ ಅವುಗಳಿರುವ ಪರಿಸರದಲ್ಲೇ ಒದಗಿಸಿ ಅವನ್ನಷ್ಟೇ ತಿನ್ನುವಂತೆ ತಾಕೀತು ಮಾಡಿದೆ. ಈ ಭೂಮಿಯ ನ್ಯಾಯ ಒಂದು ಸಮತಾವಾದ ಇದ್ದಂತೆ ಎಂದು ಹೇಳಿದ.

ಬಂದವರ ಜೊತೆ ಇದೇ ವಿಷಯ ಮತ್ತೆ ಮತ್ತೆ